111

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ

ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ, 03 ನೇ ಮಹಡಿ, ಡಾ.ಬಿ.ಆರ್. ಅಂಬೇಡ್ಕರ್, ವೀಧಿ, ಬೆಂಗಳೂರು–560001

**E-mail ID:icps.kar@gmail.com** **Phone No: 080-22867382**

ಸಂಖ್ಯೆ:ಕರಾಸಮರಸೊ/ತರಬೇತಿ/ಕೋವಿಡ್–19 TOT/03/2020–21 ದಿನಾಂಕ: 18.03.2021

## ಸುತ್ತೋಲೆ

**ವಿಷಯ:**–ಕಛೇರಿಗಳು/ಕೆಲಸದ ಸ್ಥಳಗಳಲ್ಲಿ ಕೋವಿಡ್–19ರ ಹರಡುವಿಕೆಯನ್ನು ನಿಯಂತ್ರಣಕ್ಕಾಗಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮವಹಿಸುವುದರ ಬಗ್ಗೆ.

**ಉಲ್ಲೇಖ:**–1. ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇವರ ಸುತ್ತೋಲೆ ಸಂ.NVBDCP/EST 7B/COVID 19/2021-21, Date:-01-03-2021

2. ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇವರ ಸುತ್ತೋಲೆ ಸಂ.NVBDCP/EST 7C/COVID 19/2021-21, Date:-03-03-2021.

*****

ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಕಛೇರಿಗಳು/ಕೆಲಸದ ಸ್ಥಳಗಳಲ್ಲಿ ಕೋವಿಡ್–19ರ ಹರಡುವಿಕೆಯನ್ನು ನಿಯಂತ್ರಣಕ್ಕಾಗಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ಹಾಗೂ ಕೋವಿಡ್ ಪ್ರಕರಣಗಳು ಹೆಚ್ಚಳವಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. (02 ಸುತ್ತೋಲೆಗಳ ಪ್ರತಿಯನ್ನು ಲಗತ್ತಿಸಿದೆ).

ಸದರಿ ಸುತ್ತೋಲೆ ಹಾಗೂ ಮಾರ್ಗಸೂಚಿಯಂತೆ ಕಛೇರಿಗಳು/ಕೆಲಸದ ಸ್ಥಳಗಳು/ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್–19 ನಿಯಂತ್ರಣಕ್ಕಾಗಿ ಮುಂಜಾಗ್ರತ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

18.03.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು:–

- ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಎಲ್ಲಾ ಜಿಲ್ಲೆಯವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಲ್ಲಾ ಜಿಲ್ಲೆಯವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
- ಅಧೀಕ್ಷಕರು/ಮುಖ್ಯಸ್ಥರು/ಕಾರ್ಯದರ್ಶಿಗಳು, ಸರ್ಕಾರದ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳು, ಎಲ್ಲಾ ಜಿಲ್ಲೆಯವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ

ಕಛೇರಿ: +91 80 2335 4039
+91 80 2235 4085
ಇ-ಮೇಲ್: com-hfws@karnataka.gov.in

# ಆಯುಕ್ತಾಲಯ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ:NVBDCP/EST 7B/ COVID 19/ 2020-21 ದಿನಾಂಕ:1.3.2021

## ಸುತ್ತೋಲೆ

ವಿಷಯ:ಕಚೇರಿಗಳು/ಕೆಲಸದ ಸ್ಥಳಗಳಲ್ಲಿ ಕೋವಿಡ್-19 ರ ಹರಡುವಿಕೆಯನ್ನು ನಿಯಂತ್ರಣಕ್ಕಾಗಿ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾರ್ಗಸೂಚಿಗಳು.

ಉಲ್ಲೇಖ: ದಿನಾಂಕ: 25.02.2021 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯ 79 ನೇ ಸಭೆಯ ಸಭಾ ನಡಾವಳಿಗಳು

1. ಪೀಠಿಕೆ:

ಕಚೇರಿಗಳು ಹಾಗೂ ಇನ್ನಿತರ ಕೆಲಸದ ಸ್ಥಳಗಳು ಬಹುತೇಕ ಮುಚ್ಚಿದ ಸಂರಚನೆಯಲ್ಲಿದ್ದು, ಕಾರ್ಯನಿರ್ವಹಣಾ ಆಸನಗಳು, ಕಾರಿಡಾರ್‌ಗಳು, ಏರಿಳ ತೇರುಗಳು ಮತ್ತು ಮೆಟ್ಟಿಲುಗಳು, ವಾಹನ ನಿಲುಗಡೆ ಸ್ಥಳಗಳು, ಕೆಫೆಟೇರಿಯಾ/ಫಲಾಹಾರ ಮಂದಿರಗಳು, ಸಭಾ ಕೊಠಡಿಗಳು ಮತ್ತು ಸಭಾಂಗಣಗಳು ಇತ್ಯಾದಿ ಮತ್ತು ಕೋವಿಡ್-19 ಸೋಂಕು ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಸಂದರ್ಶಕರ ನಡುವೆ ತ್ವರಿತಗತಿಯಲ್ಲಿ ಹರಡುವ ಸಾಧ್ಯತೆಯಿರುತ್ತದೆ.

ಸೋಂಕಿನ ಹರಡುವಿಕೆಯನ್ನು ನಿಯಂತ್ರಣ ಮಾಡುವುದು ಮತ್ತು ಸಂಶಯಾಸ್ಪದ ಪ್ರಕರಣಗಳು ಈ ಪ್ರದೇಶದಲ್ಲಿ ಕಂಡು ಬಂದಲ್ಲಿ ತ್ವರಿತಗತಿಯಲ್ಲಿ ಹಾಗೂ ನೈಜ ಸಮಯದಲ್ಲಿ ಪರಿಣಾಮಕಾರಿಯಾಗಿ ಪತ್ತೆಹಚ್ಚಿ ಹರಡುವಿಕೆಯನ್ನು ಸೀಮಿತಗೊಳಿಸುವುದು ಅತ್ಯಗತ್ಯವಾಗಿದೆ.

2. ವ್ಯಾಪ್ತಿ

ಈ ದಾಖಲೆಯು ಕಚೇರಿಗಳಲ್ಲಿ ಕೋವಿಡ್-19 ನ್ನು ನಿಯಂತ್ರಣ ಮಾಡಲು ಅನುಸರಿಸಬೇಕಾದ ಮುನ್ನೆಚ್ಚರಿಕಾ ಮತ್ತು ಪ್ರತಿಸ್ಪಂದನಾ ಕಾರ್ಯಕ್ರಮಗಳ ಕುರಿತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ರೂಪುರೇಷೆಯನ್ನು ಹೊಂದಿದ್ದು, ನಾಲ್ಕು ವಿಭಾಗಗಳನ್ನು ಹೊಂದಿದೆ.

i. ಎಲ್ಲಾ ಸಂದರ್ಭಗಳಲ್ಲೂ ಅನುಸರಿಸಬೇಕಾದ ಸಾಮಾನ್ಯ ಮುನ್ನೆಚ್ಚರಿಕಾ ಕ್ರಮಗಳು
ii. ಕಚೇರಿಗಳಲ್ಲಿ ನಿರ್ದಿಷ್ಟ ಕ್ರಮಗಳು
iii. ಪ್ರಕರಣಗಳು ಘಟಿಸಿದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು
iv. ಕೋವಿಡ್-19 ರ ಸಂಶಯಾಸ್ಪದ ಮತ್ತು ದೃಢಪಟ್ಟ ಪ್ರಕರಣಗಳು ಕಂಡು ಬಂದಾಗ ಅನುಸರಿಬೇಕಾದ ಸೋಂಕು ನಿಯಂತ್ರಣಾ ಕ್ರಮಗಳು

ಕಂಟೈನ್ಮೆಂಟ್ ವಲಯಗಳಲ್ಲಿರುವ ವೈದ್ಯಕೀಯ ಮತ್ತು ಅಗತ್ಯ ಸೇವೆಗಳನ್ನು ಹೊರತುಪಡಿಸಿ ಇನ್ನಿತರ ಕಚೇರಿಗಳನ್ನು ಕಡ್ಡಾಯವಾಗಿ ಮುಚ್ಚುವುದು. ಕಂಟೈನ್ಮೆಂಟ್ ವಲಯಗಳ ಹೊರಗಿರುವ ಕಚೇರಿಗಳನ್ನು ಮಾತ್ರ ತೆರೆಯಲು ಅವಕಾಶ ನೀಡಬಹುದು.

102

3. ಸಾಮಾನ್ಯ ಮುನ್ನೆಚ್ಚರಿಕಾ ಕ್ರಮಗಳು:

ಸಾಮಾನ್ಯ ಮುನ್ನೆಚ್ಚರಿಕಾ ಕ್ರಮಗಳು ಸರಳವಾದ ಸಮುದಾಯ ಆರೋಗ್ಯ ಕ್ರಮಗಳಾಗಿದ್ದು, ಇವುಗಳನ್ನು ಅನುಸರಿಸುವುದರಿಂದ ಕೋವಿಡ್-19 ರ ಸೋಂಕನ್ನು ನಿಯಂತ್ರಣ ಮಾಡಬಹುದು.ಈ ಕ್ರಮಗಳನ್ನು ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಎಲ್ಲಾ ಸಮಯದಲ್ಲಿ ಅನುಸರಿಸುವುದು ಅತ್ಯಗತ್ಯವಾಗಿದೆ.

I. ಪ್ರತಿ ವ್ಯಕ್ತಿಯು ಸಾಮಾನ್ಯ ಪ್ರದೇಶದಲ್ಲಿ ಕಡ್ಡಾಯವಾಗಿ ಕನಿಷ್ಠ 6 ಅಡಿಗಳ (2 ಮೀಟರ್‌ಗಳು) ಅಂತರವನ್ನು ಕಾಯ್ದುಕೊಳ್ಳಬೇಕು.

II. ಎಲ್ಲಾ ಸಮಯದಲ್ಲೂ ಕಡ್ಡಾಯವಾಗಿ ಫೇಸ್‌ಕವರ್/ಮುಖಗವಸನ್ನು ಧರಿಸಿರಬೇಕು. ಈ ಮುಖಗವಸನ್ನು ಮೂಗು ಮತ್ತು ಬಾಯಿ ಮುಚ್ಚಿರುವಂತೆ ಸರಿಯಾಗಿ ಧರಿಸಿರಬೇಕು.ಫೇಸ್‌ಕವರ್/ಮುಖಗವಸಿನ ಮುಂದಿನ ಭಾಗವನ್ನು ಪದೇ ಪದೇ ಮುಟ್ಟಬಾರದು ಮತ್ತು ಕಿವಿಯ ಮೇಲಿರುವ ಪಟ್ಟಿಗಳನ್ನು ಮುಖಗವಸನ್ನು ಮೇಲೆ ಕೆಳಗೆ ಮಾಡಲು ಬಳಸಬೇಕು.

III. ಕೈಯಲ್ಲಿ ಕೊಳೆಯು ಕಾಣದಿದ್ದ ಸಂಧರ್ಭವು ಸೇರಿದಂತೆ ಆಗಾಗ್ಗೆ ಕೈಯನ್ನು ಸೋಪಿನಿಂದ ತೊಳೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು(ಕನಿಷ್ಠ 40-60 ಸೆಕೆಂಡುಗಳು). ಸಾಧ್ಯವಿರುವಲ್ಲಿ ಮದ್ಯಸಾರಯುಕ್ತ ಸ್ಯಾನಿಟೈಸರ್‌ನ್ನು (ಕನಿಷ್ಠ 20 ಸೆಕೆಂಡುಗಳು) ಬಳಕೆಯನ್ನು ಮಾಡಬೇಕು ಮತ್ತು ಸಾಧ್ಯವಿರುವೆಡೆ ಇದರ ಲಭ್ಯತೆಯನ್ನು ಖಾತ್ರಿಪಡಿಸಬೇಕು.

IV. ಕೆಮ್ಮಿನ ಸಭ್ಯತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಕೆಮ್ಮುವಾಗ ಹಾಗೂ ಸೀನುವಾಗ ಟಿಶ್ಯೂ ಪೇಪರ್/ ಕರವಸ್ತ್ರ/ ಮೊಣಕೈಯಿಂದ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳುವುದು ಮತ್ತು ವ್ಯವಸ್ಥಿತವಾಗಿ ಟಿಶ್ಯೂ ಪೇಪರ್‌ನ್ನು ವಿಲೇವಾರಿ ಮಾಡುವುದು.

V. ಆರೋಗ್ಯ ಸ್ಥಿತಿಯ ಸ್ವಯಂ ಮೇಲ್ವಿಚಾರಣೆ ಮತ್ತು ಯಾವುದೇ ರೀತಿಯ ಅನಾರೋಗ್ಯ ಪರಿಸ್ಥಿತಿ ಕಂಡುಬಂದಲ್ಲಿ ಮೇಲಾಧಿಕಾರಿಗಳ ಗಮನಕ್ಕೆ ತರುವುದು.

VI. ಉಗುಳುವಿಕೆ ಮತ್ತು ಮೂಗನ್ನು ಉಜ್ಜುವುದು ಹಾಗೂ ಸಿಂಬಳವನ್ನು ತೆಗೆಯುವುದನ್ನು ನಿಯಂತ್ರಿಸಲಾಗಿದೆ.

VII. ಎಲ್ಲಾ ಉದ್ಯೋಗಿಗಳು ಕಡ್ಡಾಯವಾಗಿ ಆರೋಗ್ಯ ಸೇತುಆಪ್ ಅನ್ನು ಅನುಸ್ಥಾಪನೆ ಮಾಡಿಕೊಳ್ಳುವುದು ಮತ್ತು ಬಳಕೆ ಮಾಡಬೇಕು.

4. ಕಚೇರಿಗಳಲ್ಲಿ ಅನುಸರಿಸಬೇಕಾದ ನಿರ್ದಿಷ್ಟ ಕ್ರಮಗಳು:

I. ಕಚೇರಿಗಳ ಪ್ರವೇಶದ್ವಾರದಲ್ಲಿ ಕಡ್ಡಾಯವಾಗಿ ಕೈಯನ್ನು ಸ್ವಚ್ಛ ಮಾಡಲು ಸ್ಯಾನಿಟೈಸರ್ ವಿನಿಯೋಗಕ ಗಿಂಡಿಗಳು ಮತ್ತು ತರಬೇತಿ ಪಡೆದಿರುವ ವ್ಯಕ್ತಿಯಿಂದ ಥರ್ಮಲ್ ಸ್ಕಾನಿಂಗ್ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

II. ರೋಗರಹಿತ ಲಕ್ಷಣವಿರುವ ಸಿಬ್ಬಂದಿಗಳು/ಸಂದರ್ಶಕರನ್ನು ಮಾತ್ರ ಕಚೇರಿ ಪ್ರವೇಶಿಸಲು ಅವಕಾಶ ನೀಡಬೇಕು.

III. ಕಂಟೈನ್‌ಮೆಂಟ್ ವಲಯದಲ್ಲಿ ವಾಸವಿರುವ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿಗಳು ಈ ವಿಷಯವನ್ನು ತಮ್ಮ ನಿಯಂತ್ರಣ ಪ್ರಾಧಿಕಾರಿಗೆ ತಿಳಿಸಬೇಕು ಮತ್ತು ಈ ಪ್ರದೇಶವು ಅಧಿಸೂಚನೆಯಿಂದ ಮುಕ್ತವಾಗುವ ತನಕ ಕಚೇರಿಗೆ ಬರುವ ಅಗತ್ಯವಿರುವುದಿಲ್ಲ. ಈ ಸಿಬ್ಬಂದಿಗಳಿಗೆ ಮನೆಯಿಂದ ಕರ್ತವ್ಯ ನಿರ್ವಹಿಸಲು ಅವಕಾಶ ನೀಡುವುದು.

IV. ಚಾಲಕರು ಕಡ್ಡಾಯವಾಗಿ ಎಲ್ಲಾ ಸಮಯದಲ್ಲೂ ದೈಹಿಕಅಂತರವನ್ನು ಕಾಯ್ದುಕೊಳ್ಳಬೇಕು. ವಿಶೇಷವಾಗಿ ಕೊಠಡಿಗಳು ಮತ್ತು ಚಾಲಕರಿಗೆ ನಿರ್ದಿಷ್ಟಪಡಿಸಿದ ಸ್ಥಳಗಳು. ಕೋವಿಡ್-19 ಕ್ಕೆ ಸಂಬಂಧಿಸಿದಂತೆ ಮಾಡಬೇಕಾದ ಮತ್ತು ಮಾಡಬಾರದ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕಂಟೈನ್‌ಮೆಂಟ್ ಪ್ರದೇಶದಲ್ಲಿ ವಾಸವಿರುವ ಚಾಲಕರುಗಳಿಗೆ ವಾಹನ ಚಾಲನೆ ಮಾಡಲು ಅವಕಾಶ ನೀಡದಂತೆ, ಸೇವಾ ಪೂರೈಕೆದಾರರು/ಅಧಿಕಾರಿಗಳು/ಸಿಬ್ಬಂದಿಗಳು ಖಚಿತಪಡಿಸಿಕೊಳ್ಳಬೇಕು.

V. ವಾಹನದ ಒಳಭಾಗವನ್ನು ದಿನಕ್ಕೆ ಎರಡು ಬಾರಿ ಶೇ.1 ರ ಸೋಡಿಯಂ ಹೈಪೋಕ್ಲೋರೈಟ್‌ನ ದ್ರಾವಣ/ಸಿಂಪಡಿಕೆಯನ್ನು ಬಳಸಿ ಸೋಂಕುರಹಿತ ಮಾಡುವುದು. ಪದೇ ಪದೇ ಮುಟ್ಟುವ ಮೇಲ್ಮೈಗಳಾದ ಸ್ಟೀಯರಿಂಗ್, ಬಾಗಿಲ ಹಿಡಿಗಳು, ಕೀಲಿಗಳು ಇತ್ಯಾದಿಗಳನ್ನು ಮದ್ಯಸಾರಯುಕ್ತ ಕಾಗದ ಅಥವಾ ಶೇ.5ರ ಲೈಸಾಲ್‌ನಿಂದ ನಿಯಮಿತವಾಗಿ ಸೋಂಕುರಹಿತ ಮಾಡುವುದು.

VI. ಅತಿ ಹೆಚ್ಚು ಗಂಡಾಂತರ ಅನಾರೋಗ್ಯ ಪರಿಸ್ಥಿತಿಯಲ್ಲಿರುವ (ಹಿರಿಯ ಉದ್ಯೋಗಿಗಳು, ಗರ್ಭಿಣಿ ಮಹಿಳೆಯರು, ಚಿಕಿತ್ಸೆಯಲ್ಲಿರುವವರು) ಉದ್ಯೋಗಿಗಳಿಗೆ ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಲು ಸಲಹೆ ನೀಡುವುದು ಸಾರ್ವಜನಿಕರಿಗೆ ನೇರ ಸಂಪರ್ಕ ಬರದಂತೆ ಎಚ್ಚರಿಕೆ ವಹಿಸಲು ತಿಳಿಸುವುದು.

VII. ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು ಮತ್ತು ಸಂದರ್ಶಕರು ಮುಖಗವಸು/ಫೇಸ್‌ಕವರನ್ನು ಧರಿಸಿದ್ದರೆ ಮಾತ್ರ ಕಚೇರಿಗೆ ಪ್ರವೇಶವನ್ನು ನೀಡುವುದು. ಫೇಸ್‌ಕವರ್/ಮುಖಗವಸನ್ನು ಕಚೇರಿಯ ಒಳಗಡೆ ಎಲ್ಲಾ ಸಮಯದಲ್ಲೂ ಕಡ್ಡಾಯವಾಗಿ ಧರಿಸಿರಬೇಕು.

VIII. ಸಂದರ್ಶಕರು ಭೇಟಿ ಮಾಡಲು ಉದ್ದೇಶಿಸಿರುವ ಅಧಿಕಾರಿಯ ಪೂರ್ವಾನುಮತಿಯನ್ನು ಪಡೆಯಬೇಕು. ಇವರನ್ನು ಕಚೇರಿಯ ಪ್ರವೇಶದ್ವಾರದಲ್ಲೇ ವ್ಯವಸ್ಥಿತವಾಗಿ ತಪಾಸಣೆ ಮಾಡಿ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು.

IX. ಸಭೆಗಳನ್ನು ಸಾಧ್ಯವಾದಷ್ಟು ವಿಡಿಯೋ ಸಂವಾದದ ಮುಖೇನ ನಡೆಸುವುದು.

X. ಕೋವಿಡ್-19 ರ ನಿಯಂತ್ರಣಕ್ಕೆ ಸಂಬಂಧಿಸಿದ ಭಿತ್ತಿಪತ್ರಗಳು/ಸ್ಟಾಂಡೀಸ್/ ದೃಶ್ಯ-ಶ್ರವಣ ಮಾಧ್ಯಮಗಳನ್ನು ಜನರಿಗೆಕಾಣುವಂತೆ ಪ್ರದರ್ಶಿಶಬೇಕು.

XI. ಪಾರ್ಕಿಂಗ್ ಸ್ಥಳಗಳಲ್ಲಿ ಮತ್ತುಕಚೇರಿಯ ಹೊರಭಾಗದಲ್ಲಿ ದೈಹಿಕ ಅಂತರಗಳ ಮಾನದಂಡಗಳನ್ನು ಅನುಸರಿಸಿ ವ್ಯವಸ್ಥಿತವಾಗಿ ಜನಸಂದಣಿಯನ್ನು ನಿರ್ವಹಿಸಬೇಕು.

1050

XII. ವ್ಯಾಲೆಟ್ ಪಾರ್ಕಿಂಗ್ ವ್ಯವಸ್ಥೆಯು ಜಾರಿಯಲ್ಲಿದ್ದರೆ ಇದನ್ನು ಕಾರ್ಯರೂಪಕ್ಕೆ ತರುವುದು. ಇದನ್ನು ನಿರ್ವಹಿಸುವ ಸಿಬ್ಬಂದಿಯು ಸೂಕ್ತವಾದ ಮುಖಗವಸು/ಫೇಸ್‌ಕವರ್ ಮತ್ತು ಕೈಗವಸುಗಳನ್ನು ಧರಿಸಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ವಾಹನದಸ್ಟೀಯರಿಂಗ್, ಬಾಗಿಲ ಹಿಡಿಗಳು, ಕೀಲಿಗಳು ಇತ್ಯಾದಿಗಳನ್ನು ನಿಯಮಿತವಾಗಿ ಸೋಂಕುರಹಿತ ಮಾಡುವುದು.

XIII. ಕಚೇರಿಯ ಒಳಆವರಣ ಅಥವಾ ಹೊರಾಂಗಣದಲ್ಲಿ ಯಾವುದಾದರೂ ಅಂಗಡಿ ಮಳಿಗೆಗಳು, ಕೆಫೆಟೋರಿಯಾ/ಉಪಹಾರ ಮಂದಿರಗಳು ಇದ್ದಲ್ಲಿ ಕಡ್ಡಾಯವಾಗಿ ಎಲ್ಲಾ ಸಮಯದಲ್ಲೂ ದೈಹಿಕಅಂತರವನ್ನು ಕಾಯ್ದುಕೊಳ್ಳುವುದನ್ನು ಖಾತ್ರಿಪಡಿಸಿಬೇಕು.

XIV. ಕಚೇರಿಯ ಆವರಣದಲ್ಲಿ ಜನರು ಸಾಲಾಗಿ ನಿಲ್ಲುವುದಕ್ಕೆ ಹಾಗೂ ದೈಹಿಕಅಂತರವನ್ನು ಖಾತ್ರಿಪಡಿಸುವುದಕ್ಕೆ ನಿರ್ದಿಷ್ಟ ಗುರುತುಗಳನ್ನು ಮಾಡಬೇಕು.

XV. ಕಾರ್ಯನಿರ್ವಹಣಾ ಸ್ಥಳಗಳಲ್ಲಿ ವಿಶೇಷವಾಗಿ ಪದೇ ಪದೇ ಮುಟ್ಟುವ ಮೇಲ್ಮೈಗಳನ್ನು ವ್ಯವಸ್ಥಿತವಾಗಿ ದಿನಕ್ಕೆ ಎರಡು ಬಾರಿ ಸ್ವಚ್ಛಗೊಳಸುವುದು ಹಾಗೂ ಸೋಂಕು ನಿವಾರಣಾಕ್ರಮಗಳನ್ನು ಅನುಸರಿಸುವುದು.

XVI. ಹ್ಯಾಂಡ್ ಸ್ಯಾನಿಟೈಸರ್‌ನ ಲಭ್ಯತೆಯನ್ನು ಖಾತ್ರಿಪಡಿಸುವುದು. ಶೌಚಾಲಯಗಳಲ್ಲಿ ದ್ರವರೂಪದ ಮಾರ್ಜಕಗಳನ್ನು ಮತ್ತು ಹರಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು.

XVII. ಏರಿಳಿ ತೇರುಗಳಲ್ಲಿ ಜನರ ಸಂಖ್ಯೆಯನ್ನು ಮಿತಿಗೊಳಸುವುದು. ಏರಿಳಿ ತೇರುಗಳ ಹಂತಗಳ ಮೇಲೆ ದೈಹಿಕಅಂತರವನ್ನು ಕಾಯ್ದುಕೊಳ್ಳಲು ಗುರುತುಗಳನ್ನು ಹಾಕುವುದು.

XVIII. ಹವಾ ನಿಯಂತ್ರಣಾವ್ಯವಸ್ಥೆ/ಗಾಳಿ ಬೆಳಕಿನ ವ್ಯವಸ್ಥೆಗೆ ಕೇಂದ್ರ ಲೋಕೋಪಯೋಗಿಇಲಾಖೆಯ ಮಾರ್ಗಸೂಚಿಗಳನ್ನು ಅನುಸರಿಸುವುದು. ಹವಾ ನಿಯಂತ್ರಣ ವ್ಯವಸ್ಥೆಯ ಉಪಕರಣಗಳಲ್ಲಿ ತಾಪಮಾನವನ್ನು 24-30° ಸೆಂಟಿಗ್ರೇಡ್ ನಡುವೆ ನಿಗದಿಪಡಿಸಬೇಕು ಮತ್ತು ಆರ್ದ್ರತೆಯು ಶೇ. 40-70ರ ನಡುವೆ ಇರಬೇಕು. ಸಾಧ್ಯವಾದಷ್ಟು ಉತ್ತಮ ಗಾಳಿ ಬೆಳಕು ಒಳಬರಲು ಅಗತ್ಯ ವ್ಯವಸ್ಥೆ ಮಾಡಬೇಕು.

XIX. ಬೃಹತ್ ಪ್ರಮಾಣದ ಭೌತಿಕ ಸಂದಣಿಯ ನಿಷೇಧವನ್ನು ಮುಂದುವರೆಸಬೇಕು.

XX. ಕಚೇರಿಯ ಆವರಣದಲ್ಲಿ ಪರಿಣಾಮಕಾರಿಯಾದ ಸ್ವಚ್ಛತಾ ವ್ಯವಸ್ಥೆಯನ್ನು ಆಗಾಗ್ಗೆ ಮಾಡಬೇಕು ವಿಶೇಷವಾಗಿ ಶೌಚಾಲಯಗಳು, ಕುಡಿಯುವ ನೀರಿನ ಸ್ಥಳಗಳು ಮತ್ತು ಕೈ ತೊಳೆಯುವ ಜಾಗಗಳು ಮತ್ತು ಪ್ರದೇಶಗಳು.

XXI. ದಿನಕ್ಕೆ ಎರಡು ಬಾರಿ ಕಚೇರಿಯ ಆವರಣವನ್ನು ಮತ್ತು ಸಾಮಾನ್ಯ ಪ್ರದೇಶಗಳನ್ನು ಶೇ.1 ರ ಸೋಡಿಯಂ ಹೈಪೋಕ್ಲೋರೈಟ್‌ನ ದ್ರಾವಣವನ್ನು ಬಳಸಿ ಸೋಂಕುರಹಿತ ಮಾಡುವುದು. ಪದೇ ಪದೇ ಮುಟ್ಟುವ ಮೇಲ್ಮೈ ಪ್ರದೇಶಗಳಾದ ಬಾಗಿಲ ಹಿಡಿಗಳು, ಏರಿಳಿ ತೇರುಗಳ ಗುಂಡಿಗಳು, ಬೆಂಚುಗಳು, ಶೌಚಾಲಯಗಳಲ್ಲಿ ಅಳವಡಿಸಿರುವ ಸಾಮಗ್ರಿಗಳಿಗೆ ಆದ್ಯತೆ ನೀಡುವುದು.

XXII. ಸಂದರ್ಶಕರು ಮತ್ತು ಉದ್ಯೋಗಿಗಳು ಬಿಟ್ಟುಹೋದ ಫೇಸ್‌ಕವರ್/ಮುಖಗವಸು/ಕೈಗವಸುಗಳನ್ನು ವ್ಯವಸ್ಥಿತವಾಗಿ ವಿಲೇವಾರಿ ಮಾಡಲುಕಸದ ಬುಟ್ಟಿಗಳನ್ನು ಖಾತ್ರಿಪಡಿಸುವುದು.

XXIII. <u>ಕೆಫೆಟೇರಿಯಾ/ಉಪಾಹಾರ ಮಂದಿರ/ಭೋಜನಾ ಸಭಾಂಗಣಗಳಲ್ಲಿ</u>

i. ವೈಯುಕ್ತಿಕ ಸ್ವಚ್ಛತೆಯನ್ನು ಖಾತ್ರಿಪಡಿಸಲು ಪ್ರವೇಶದ್ವಾರದಲ್ಲಿ ಕಡ್ಡಾಯವಾಗಿ ಹ್ಯಾಂಡ್ ಸ್ಯಾನಿಟೈಸರ್‌ನ ವ್ಯವಸ್ಥೆ ಮಾಡುವುದು.

ii. ನಿಯಮಿತವಾಗಿ ದೇಹದ ತಾಪಮಾನವನ್ನು ಪರಿಶೀಲಿಸುವುದು ಮತ್ತು ಉಸಿರಾಟಕ್ಕೆ ತೊಡಕಾಗಿರುವ ಲಕ್ಷಣಗಳನ್ನು ಗಮನಿಸಬೇಕು. ಅನಾರೋಗ್ಯಕರ ಪರಿಸ್ಥಿತಿ ಕಂಡುಬಂದಲ್ಲಿ ಫ್ಲೂ ಸಂಬಂಧಿ ಲಕ್ಷಣಗಳು ಕಂಡುಬಂದಲ್ಲಿ ವೈದ್ಯರನ್ನು ಸಂಪರ್ಕಿಸುವುದು.

iii. ಜನಸಂದಣಿ ಮತ್ತು ಸಾಲುಗಳ ನಿರ್ವಹಣೆಗೆ ದೈಹಿಕಅಂತರವನ್ನು ಕಾಯ್ದುಕೊಳ್ಳಲು ಕೆಫೆಟೇರಿಯಾ/ಉಪಾಹಾರ ಮಂದಿರ/ಭೋಜನಾ ಸಭಾಂಗಣಗಳ ನೆಲಹಾಸಿನ ಮೇಲೆ ಗುರುತುಗಳನ್ನು ಹಾಕುವುದು.

iv. ಸಿಬ್ಬಂದಿ/ಸರಬರಾಜುದಾರರು ಮುಖಗವಸು ಮತ್ತು ಕೈಗವಸುಗಳನ್ನು ಧರಿಸಬೇಕು ಮತ್ತು ಅಗತ್ಯವಿರುವ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು.

v. ಪ್ರತಿ ಪಾಕ್ಷಿಕಕೊಮ್ಮೆ (ಹದಿನೈದು ದಿನಗಳಿಗೊಮ್ಮೆ) ಎಲ್ಲಾಸಿಬ್ಬಂದಿ/ಸರಬರಾಜುದಾರರಿಗೆ ಆರ್‌ಟಿ-ಪಿಸಿಆರ್ ಪರೀಕ್ಷೆಯನ್ನು ಮಾಡಿಸಬೇಕು. ನೆಗೆಟಿವ್ ವರದಿಯನ್ನು ಹೊಂದಿರುವವರಿಗೆ ಮಾತ್ರ ಕೆಲಸ ನಿರ್ವಹಿಸಲು ಅವಕಾಶ ನೀಡುವುದು.

vi. ಗ್ರಾಹಕರ ನಡುವೆಕನಿಷ್ಠ ಆರು ಅಡಿಗಳ ಅಂತರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿಆಸನ ವ್ಯವಸ್ಥೆ ಮಾಡುವುದು.

vii. ಅಡುಗೆ ಮನೆಯಲ್ಲಿ ಸಿಬ್ಬಂದಿಗಳು ದೈಹಿಕಅಂತರದ ಮಾನದಂಡಗಳನ್ನು ಅನುಸರಿಸುವುದು. ಕಡ್ಡಾಯವಾಗಿ ಮುಖಗವಸನ್ನು ಧರಿಸಿರಬೇಕು. ಉಸಿರಾಟ ಸಂಬಂಧಿ ಲಕ್ಷಣಗಳಾಧ ಜ್ವರ, ಕೆಮ್ಮು, ಶೀತ, ಗಂಟಲುಕೆರೆತ, ಉಸಿರಾಟದ ತೊಂದರೆ ಮತ್ತುಇನ್ನಿತರ ಲಕ್ಷಣಗಳನ್ನು ಹೊಂದಿರುವವರನ್ನು

ದೈನಂದಿನ ಕರ್ತವ್ಯದಿಂದ ಹೊರಗಿಡಬೇಕು ಮತ್ತುತಕ್ಷಣವೇ ವೈದ್ಯಕೀಯ ಸಲಹೆಗಳನ್ನು ಪಡೆಯಲು ಸಲಹೆ ನೀಡಬೇಕು ಮತ್ತು ಕೋವಿಡ್-19 ರ ಪರೀಕ್ಷೆಯನ್ನು ಮಾಡಿಸಿಕೊಳ್ಳಲು ತಿಳಿಸಬೇಕು.

5. ಪ್ರಕರಣಗಳು ಘಟಿಸಿದಾಗ ಅನುಸರಿಸಬೇಕಾದ ಕ್ರಮಗಳು:

ಮೇಲ್ಕಂಡ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿದಾಗ್ಯೂ, ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳ ನಡುವೆ ದೃಡಪಟ್ಟ ಪ್ರಕರಣಗಳು ಕಂಡುಬಂದಲ್ಲಿ ಕೆಳಕಂಡ ಕ್ರಮಗಳನ್ನು ವಹಿಸಲು ತಿಳಿಸಲಾಗಿದೆ. ಒಂದು ಅಥವಾ ಅನೇಕ ವ್ಯಕ್ತಿಗಳು ಕೊಠಡಿ/ಕಚೇರಿಯ ಜಾಗವನ್ನು ಹಂಚಿಕೊಳ್ಳುತ್ತಿದ್ದು ಕೋವಿಡ್-19 ರೋಗಲಕ್ಷಣಗಳಿಂದ ಬಳಲುತ್ತಿದ್ದರೆ

- ಅನಾರೋಗ್ಯ ಪೀಡಿತ ವ್ಯಕ್ತಿಯನ್ನು ಕಾರ್ಯಾಚರಣ ಸ್ಥಳದಿಂದ ಇತರರಿಂದ ಪ್ರತ್ಯೇಕಗೊಳಿಸಿ ಪ್ರತ್ಯೇಕಕೊಠಡಿ ಅಥವಾ ಸ್ಥಳದಲ್ಲಿಡಬೇಕು. ವೈದ್ಯರು ಪರೀಕ್ಷಿಸುವವರೆಗೂ ಮುಖಗವಸು/ಫೇಸ್‌ಕವರ್‌ನ್ನು ಧರಿಸಲು ನೀಡಬೇಕು.
- ತಕ್ಷಣವೇ ಹತ್ತಿರದ ಆರೋಗ್ಯ ಸಂಸ್ಥೆಗೆ ಮಾಹಿತಿ ನೀಡುವುದು ಅಥವಾ ರಾಜ್ಯ ಅಥವಾ ಜಿಲ್ಲಾ ಸಹಾಯವಾಣಿಗೆ ಕರೆ ಮಾಡುವುದು.
- ನಿಗದಿತ ಆರೋಗ್ಯ ಪ್ರಾಧಿಕಾರಿಯಿಂದ (ಜಿಲ್ಲಾಆರ್‌ಆರ್‌ಟಿ/ಫಿಜಿಷಿಯೆನ್) ಗಂಡಾಂತರ ಸ್ಥಿತಿಯ ಮೌಲ್ಯಮಾಪನ ಮಾಡುವುದು ಮತ್ತು ಈ ಪ್ರಕರಣ ಮತ್ತುಆತ/ಆಕೆಯ ಸಂಪರ್ಕಿತರ ನಿರ್ವಹಣೆಯನ್ನು ಮುಂದಿನ ಸಮಾಲೋಚನೆಯತನಕ ಮಾಡುವುದು ಹಾಗೂ ಸೋಂಕು ನಿವಾರಣಾ ಕ್ರಮಗಳನ್ನು ಅನುಸರಿಸುವುದು.
- ಪ್ರಕರಣಗಳು ಮತ್ತು ಸಂಪರ್ಕಿತರ ನಿರ್ವಹಣೆಯನ್ನು ಪ್ರಸ್ತುತಚಾಲ್ತಿಯಲ್ಲಿರುವ ರಾಜ್ಯಶಿಷ್ಟಾಚಾರದಂತೆ ಮಾಡುವುದು.

6. ಆವರಣಗಳ ನಿರ್ವಹಣೆ :

ಒಂದು ಅಥವಾ ಎರಡು ಪ್ರಕರಣಗಳು ವರದಿಯಾದಲ್ಲಿ , ಸೋಂಕು ನಿವಾರಣಾ ಪ್ರಕ್ರಿಯೆಯನ್ನು ರೋಗಿಯು ಕಾರ್ಯನಿರ್ವಹಿಸಿದ ಜಾಗ ಮತ್ತುಕಳೆದ 48 ಗಂಟೆಗಳಲ್ಲಿ ಭೇಟಿ ನೀಡಿದ ಸ್ಥಳಕ್ಕೆ ಮಾತ್ರ ಸೀಮಿತಗೊಳಿಸುವುದು. ಸೋಂಕುನಿವಾರಣೆಯ ನಂತರ ಶಿಷ್ಟಾಚಾರಗಳಿಗನುಸಾರವಾಗಿ ಕೆಲಸವನ್ನು ಮುಂದುವರೆಸುವುದು.

ಕಾರ್ಯಾಚರಣ ಸ್ಥಳದಲ್ಲಿ ಒಂದು ಪಕ್ಷ ದೊಡ್ಡ ಪ್ರಮಾಣದಲ್ಲಿ (5 ಅಥವಾ ಅದಕ್ಕಿಂತ ಹೆಚ್ಚು)ಪ್ರಕರಣಗಳು ವರದಿಯಾದಲ್ಲಿ ಆ ವಿಭಾಗ ಅಥವಾ ಕಟ್ಟಡವನ್ನು ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳಂತೆ "ಕಂಟೈನ್ ಮೆಂಟ್ ವಲಯ" ವೆಂದು ಪರಿಗಣಿಸುವುದು ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

ಆಯುಕ್ತರು
ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳು

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ,**

1. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
2. ಮುಖ್ಯಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು
3. ಜಿಲ್ಲಾಆರೋಗ್ಯ ಮತ್ತುಕುಟುಂಬ ಕಲ್ಯಾಣ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು
4. ಜಿಲ್ಲಾ ಶಸ್ತ್ರಚಿಕಿತ್ಸಕರು, ಎಲ್ಲಾ ಜಿಲ್ಲೆಗಳು
5. ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಎಲ್ಲಾ ಜಿಲ್ಲೆಗಳು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ
7. ನಿರ್ದೇಶಕರು, ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸೇವೆಗಳು

**ಪ್ರತಿಯನ್ನು ಮಾಹಿತಿಗಾಗಿ,**

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
2. ಸನ್ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
3. ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ, ಕರ್ನಾಟಕ ಸರ್ಕಾರ
4. ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

110

ಕಛೇರಿ ದೂರವಾಣಿ : +91 80 23354039
+91 80 23354085
ಇ-ಮೇಲ್: com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

## ಕನ್ನಡ ಕಾಯಕ ವರ್ಷಾಚರಣೆ

ಸಂಖ್ಯೆ:NVBDCP/EST7C/COVID19/2020-21 ದಿನಾಂಕ:03-03-2021

**<u>ಸುತ್ತೋಲೆ</u>**

ವಿಷಯ: ಕೋವಿಡ್ ಪ್ರಕರಣಗಳು ಹೆಚ್ಚಳವಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು.
ಉಲ್ಲೇಖ: ರಾಜ್ಯ ಮಟ್ಟದ ಕೋವಿಡ್ 19 ತಾಂತ್ರಿಕ ಸಲಹಾ ಸಮಿತಿಯ 80ನೇ ಸಭಾ ನಡಾವಳಿಗಳು, ದಿನಾಂಕ: 01.03.2021.

ಪ್ರಸ್ತುತ, ರಾಜ್ಯದಲ್ಲಿ ಕೋವಿಡ್ 19 ಪ್ರಕರಣಗಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗಿದ್ದರೂ ಸಹ, ಅಲ್ಲಲ್ಲಿ ಗುಂಪು ಗುಂಪಾಗಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದರಿಂದ, ಎರಡನೇ ಅಲೆಯ ಅಪಾಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ . ಉಲ್ಲೇಖದ ಅನ್ವಯ ಈ ಕೆಳಗಿನ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

1. ಯಾವುದೇ ವಸತಿ ಸಮುಚ್ಚಯ ಸಂಕೀರ್ಣ (Apartment complex ) ಗಳು / ಪ್ರದೇಶಗಳಲ್ಲಿ 5 ಅಥವಾ ಅದಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾದ ಪಕ್ಷದಲ್ಲಿ, ಸದರಿ, ಸಂಕೀರ್ಣ /ಪ್ರದೇಶವನ್ನು 'ಕಂಟೇನ್ಮೆಂಟ್ ವಲಯ' ವೆಂದು ಗುರುತಿಸಿ, ಶಿಷ್ಟಾಚಾರದ ಅನ್ವಯ ಅಗತ್ಯ ಕೋವಿಡ್ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು.
2. ಸಾರ್ವಜನಿಕ ಪ್ರದೇಶಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸುವುದು. ಹಾಗೂ ಈ ಕ್ರಮವನ್ನು ಜಾರಿಗೊಳಿಸಲು ಮಾರ್ಷಲ್ / ಪೋಲೀಸ್ ಸಿಬ್ಬಂದಿಗಳ ಸಹಾಯವನ್ನು ಪಡೆಯುವುದು.
3. ಮುಚ್ಚಿದ ಸಂರಚನೆಯನ್ನು ( closed areas) ಹೊಂದಿದ ಸ್ಥಳಗಳಾದ ರೆಸ್ಟೋರೆಂಟ್‌ಗಳು, ಪಬ್ ಗಳು, ಕೆಫೆಟೇರಿಯಾ / ಹೋಟೆಲ್‌ಗಳು, ಶೈಕ್ಷಣಿಕ ಸಂಸ್ಥೆಗಳು, ಹಾಸ್ಟೆಲ್‌ಗಳು, ಕಛೇರಿಗಳು . ಕಾರ್ಖಾನೆ ಇತ್ಯಾದಿ ಪ್ರದೇಶಗಳಲ್ಲಿ ಮಾರ್ಷಲ್ / ಪೋಲೀಸ್ ಸಿಬ್ಬಂದಿಗಳ ನೆರವಿನಿಂದ ದೈಹಿಕ ಅಂತರದ ಪಾಲನೆಯನ್ನು ಜಾರಿಗೊಳಿಸುವುದು.
4. ಹಾಸ್ಟೆಲ್ / ಬೋರ್ಡಿಂಗ್ . ಶೈಕ್ಷಣಿಕ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು, ಹೋಟೆಲ್, ರೆಸ್ಟೋರೆಂಟ್, ಪಬ್, ಕೇಟರಿಂಗ್ ಏಜೆನ್ಸಿಗಳ ಅಡುಗೆ ಸಿಬ್ಬಂದಿ ಹಾಗೂ ಇತರ ಸೇವೆಗಳನ್ನು ಒದಗಿಸುವ ಸಿಬ್ಬಂದಿಗಳು, ಸಿದ್ಧ ಉಡುಪು ಕಾರ್ಖಾನೆಗಳ (garment factories) ಸಿಬ್ಬಂದಿ, ಕಛೇರಿಗಳು, ಮುಚ್ಚಿದ ಸಂರಚನೆ ಮತ್ತು ಹೆಚ್ಚಿನ ಜನ ಸಂದಣಿಯಿರುವ ಪ್ರದೇಶಗಳ ಅಂಗಡಿ ಮಾಲೀಕರು, ಪ್ರವಾಸೋದ್ಯಮ ಸ್ಥಳಗಳು, ಧೀರ್ಘ ಕಾಲದವರೆಗೂ ಆರೈಕೆ ನೀಡುವ ಕೇಂದ್ರಗಳು (long term care facilities like old age homes, dementia centers), ಇತ್ಯಾದಿ ಗಳಲ್ಲಿನ ಸಿಬ್ಬಂದಿಗಳು ಪ್ರತಿ 15 ದಿನಗಳಿಗೆ ಒಮ್ಮೆ ಆರ್‌ಟಿ – ಪಿಸಿಆರ್ ಪರೀಕ್ಷೆಗೆ (pooling of 1:5 in lab) ಒಳಪಡುವುದು ಕಡ್ಡಾಯವಾಗಿರುತ್ತದೆ.

109

5. ಹೈರಿಸ್ಕ್ ಪ್ರದೇಶಗಳಲ್ಲಿರುವ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಶೀಘ್ರವಾಗಿ ಪತ್ತೆ ಹಚ್ಚುವುದು ಹಾಗೂ ಪರೀಕ್ಷಿಸುವ ನಿಟ್ಟಿನಲ್ಲಿ (1:20) ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

6. ಮನೆಯಲ್ಲಿ ಪ್ರತ್ಯೇಕವಾಗಿರುವ ಕೋವಿಡ್-19 ಸೋಂಕಿತರನ್ನು ದಿನಬಿಟ್ಟು-ದಿನ ಸಂಪರ್ಕಿಸಿ ಚಿಕಿತ್ಸೆಯ ಸರದಿ ನಿರ್ಧಾರ (Triage) ಮಾಡುವುದು ಹಾಗೂ ಅಗತ್ಯ ಇದ್ದಲ್ಲಿ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸುವುದು.

ಆದ್ದರಿಂದ, ಕೋವಿಡ್ ನಿಯಂತ್ರಣಕ್ಕಾಗಿ ಈ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಪ್ರತಿಯನ್ನು,

1. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು – ಜಿಲ್ಲಾ ಪಂಚಾಯತ್,ಎಲ್ಲಾ ಜಿಲ್ಲೆಗಳು
3. ಜಿಲ್ಲಾ ಆರೋಗ್ಯಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
4. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
5. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಎಲ್ಲಾ ಜಿಲ್ಲೆಗಳು.

ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

1. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಅಭಿಯಾನ ನಿರ್ದೇಶಕರು ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.

ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಿದೆ.
ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.